( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ 31/03/2022**
**ಅಸಲು ದಾವೆ.ನಂ. 281/2021**
**ಪಿ.ಡಬ್ಲ್ಯೂ 1**

( ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ. ಡಿ.ಆರ್.ಎ. ವಕೀಲರಿಂದ ವಾದಿಯ ಪರವಾಗಿ )

ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಅದರಲ್ಲಿ ಇರುವ ವಿಷಯಗಳನ್ನು ನಾನೇ ಹೇಳಿ ಬರೆಸಿದ್ದೇನೆ, ಸಹಿಗಳು ನನ್ನದೆ ಇದೆ. ನಾನು ಈ ಕೆಳಗೆ ಹೇಳಿದ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಅವುಗಳನ್ನು ಪ್ರಸ್ತುತ ದಾವೆಯಲ್ಲಿ ಗುರುತಿಸಬೇಕಾಗಿ ಕೋರಿಕೊಳ್ಳುತ್ತೇನೆ.

ಸದರಿ ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ದಿಃ07-07-2006 ರ ಕ್ರಯ ಪತ್ರದ ದೃಡೀಕೃತ ನಕಲನ್ನು ನಿಪಿ1 ಎಂದು,

ದಾವಾ ಸ್ವತ್ತಿಗೆ ಸಂಬಂದಿಸಿದ ಹಕ್ಕು ಬದಲಾವಣೆ ವಹಿಯ ದೃಡೀಕೃತ ನಕಲನ್ನು ನಿಪಿ-2 ಎಂದು,

ದಾವಾ ಸ್ವತ್ತಿಗೆ ಸಂಬಂಧಿಸಿದ ನಿರ್ಧರಣಾ ಬೇಡಿಕೆ ವಹಿಯನ್ನು ನಿಪಿ-3 ಎಂದು,

ದಾವಾ ಸ್ವತ್ತಿಗೆ ಸಂಬಂಧಿಸಿದ ಋಣಭಾರ ರಾಹಿತ್ಯ ಪತ್ರವನ್ನು ನಿಪಿ4 ಎಂದು, (5 ಪುಟಗಳು)

ದಿಃ23-08-2010 ರ ಕ್ರಯ ಪತ್ರದ ದೃಡೀಕೃತ ನಕಲನ್ನು ನಿಪಿ5 ಎಂದು,

ವಂಶವೃಕ್ಷದ ಪ್ರಮಾಣ ಪತ್ರವನ್ನು ನಿಪಿ6 ಎಂದು ಗುರುತಿಸಲಾಯಿತು.

(ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )
ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಜೆ.ಎಂ.ಎಫ್.ಸಿ,ಅರಕಲಗೂಡು.